ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಕೆಲಸಗಾರರಿಗೆ ತೀರ್ಪಿನನ್ವಯ ಸಂಬಳ ನೀಡಿಕೆ.

೬೨೮. ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 'ಸಮಾನ ಕೆಲಸಕ್ಕೆ ಸಮಾನ ವೇತನ' ತತ್ವಕ್ಕನುಗುಣವಾಗಿ ದಿನಗೂಲಿ ನೌಕರರ ಬಗ್ಗೆ ಉಚ್ಚ ನ್ಯಾಯಾಲಯಂ ದಿನಾಂಕ ೧೭-೧-೧೯೮೬ರಲ್ಲಿ ಡಬ್ಲ್ಯೂಪಿ ಸಂ. ೫೦-೬೦ ಮತ್ತು ೫೬೫-೭೦/೮೫ರ ಪ್ರಕಾರ ತೀರ್ಪು ನೀಡಿರುವುದು ನಿಜವೆ,

ಆ) ಇದಕ್ಕನುಗುಣವಾಗಿ ೩-೪-೧೯೮೬ರಲ್ಲಿ ರಾಜ್ಯ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿ ತಾ॥ ೧-೧-೧೯೮೬ರಿಂದ ಜಾರಿಗೊಳಿಸಿರುವುದು ನಿಜವೆ,

ಇ) ಸದರಿ ಆಜ್ಞೆಯ ಆಡಕವನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರಿಗೂ ಅನ್ವಯಿಸಂತ್ತಿದೆ ಎಂದು ಹೆಚ್. ಯು. ಡಿ. ಇಲಾಖೆಯು ತಿಳಿಸಿರುವುದು ನಿಜವೆ,

ಈ) ಹಾಗಿದ್ದಲ್ಲಿ ರಾಜ್ಯ ಸರ್ಕಾರದ ಆದೇಶ ಮತ್ತು ಉಚ್ಚ ನ್ಯಾಯಾಲಯದ ತೀರ್ಪನ್ನು ಮೇಲಿನ ಮಂಡಳಿಯವರು ಸಂಪೂರ್ಣವಾಗಿ ನಿರಾಕರಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೆ,

ಉ) ಹಾಗಿದ್ದಲ್ಲಿ ಆಡಳಿತ ಮಂಡಳಿಯ ವಿರುದ್ಧ ಕೈಗೊಂಡ ಕ್ರಮ ಏನು

ಊ) ಬೆಂಗಳೂರು ಜಲಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂತಾದವು ತಾ॥ ೧-೧-೧೯೮೬ರಿಂದಲೇ ಈ ಆಜ್ಞೆಯನ್ನು ಅಳವಡಿಸಿಕೊಂಡು ತನ್ನ ದಿನಗೂಲಿ ನೌಕರರಿಗೆ ಹಿಂದಿನ ಬಾಕಿ ಹಣವನ್ನು ನೀಡಿರುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ದಿನಗೂಲಿ ನೌಕರರಿಗೂ ಬಾಕಿ ಹಣವನ್ನು ೧-೧-೧೯೮೬ರಿಂದ ನೀಡಲಾಗುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ನಿಜ.

ಆ) ನಿಜ.

ಇ) ನಿಜ.

ಈ) ಇಲ್ಲ. ಸರ್ಕಾರದ ಆದೇಶವನ್ನು ಜಾರಿ ಮಾಡಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಕ್ರಮ ತೆಗೆದುಕೊಳ್ಳುತ್ತಿದೆ.

ಉ) ಉದ್ಭವಿಸುವುದಿಲ್ಲ.

ಊ) ಇಲ್ಲ. ದಿನಾಂಕ ೧-೧-೧೯೮೬ರಿಂದ ಈ ಸೌಲಭ್ಯ ನೀಡುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ನಿರ್ಣಯ ತೆಗೆದುಕೊಂಡಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ದಯವಿಟ್ಟು ಆದರ ವಿವರಣೆಗಳನ್ನು ಕೊಡಬೇಕಾದುದು ಮುಖ್ಯ. ಇದರ ವಿವರಣೆಗಳನ್ನು ಹೇಳಲಿಕ್ಕೆ ಆಗುತ್ತದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ —ಸುಪ್ರೀಂಕೋರ್ಟ್ ಆದೇಶದಂತೆ ಎಲ್ಲರಿಗೂ ಅನುಕೂಲ ಮಾಡಿ ಕೊಡಬೇಕೆಂದು ಹೇಳಿದ್ದಾರೆ ಆದರ ಜೊತೆಗೆ ಅವರ ಆದೇಶದಂತೆ ನಡೆದುಕೊಳ್ಳಬೇಕು. ಆದನ್ನು ಜಾರಿಗೆ ಕೊಡತಕ್ಕಂಥ ಕಾಲದಲ್ಲಿ ಆದರಿಂದ ಉಂಟಾಗತಕ್ಕಂಥ ಹಣದ ಖರ್ಚನ್ನು ಆಯಾಯ ಸಂಸ್ಥೆಯವರೇ ವಹಿಸಿಕೊಳ್ಳಬೇಕು, ಸರ್ಕಾರದ ಹೊಣೆ ಇದರಲ್ಲಿ ಇಲ್ಲ ಎನ್ನುವುದನ್ನು ಅವರಿಗೆ ತಿಳಿಸಿದ್ದೇವೆ.

ಶ್ರೀ ಎಂ ಎಸ್. ಕೃಷ್ಣನ್.—ನಾನು ಕೇಳುತ್ತಾ ಇರುವುದು ಏನೆಂದರೆ ಸುಪ್ರೀಂ ಕೋರ್ಟ್‌ನವರ ಆದೇಶ ಏನು ಎಂದು.

ಶ್ರೀ ಎ. ಲಕ್ಷ್ಮೀಸಾಗರ್.—ಸಮಾನ ಕೆಲಸಕ್ಕೆ ಸಮಾನ ವೇತನ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಈ ಪ್ರಶ್ನೆಯ (ಅ) ಗೆ ಉತ್ತರವಾಗಿ 'ನಿಜ' ಎಂದು ಹೇಳಿದ್ದೀರಿ ಅದು 'ನಿಜ' ಎಂದು ಹೇಳಿದ ಮೇಲೆ ಇದರಲ್ಲಿರುವ (ಇ) ಪ್ರಶ್ನೆಗೆ ಉತ್ತರವಾಗಿಯೂ ನಿಜ ಎನ್ನುವುದು ಅವರಿಗೂ ಅನ್ವಯಿಸುತ್ತದೆ. ಹಾಗೆಯೇ ಇದರಲ್ಲಿರುವ (ಈ) ಪ್ರಶ್ನೆಗೆ ತಾವುಕೊಟ್ಟಿರುವ ಉತ್ತರ ನೋಡಿದರೆ ಇಲ್ಲ, ದಿನಾಂಕ ೧–೧–೮೭ ರಿಂದ ಈ ಸೌಲಭ್ಯ ನೀಡುವಂತೆ ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಲಿಯವರು ನಿರ್ಣಯ ತೆಗೆದುಕೊಂಡಿದೆ ಎಂದು ಹೇಳಿದ್ದೀರಿ ಇದನ್ನು ನೋಡಿದರೆ ಮೊದಲಿನ ಮೂರು ಪ್ರಶ್ನೆಗೆ ಈ ಪ್ರಶ್ನೆಗೂ ಕೊಟ್ಟಿರುವ ಉತ್ತರ ಸುಪ್ರೀಂಕೋರ್ಟ್‌ನವರ ತೀರ್ಮಾನಕ್ಕೂ ಮಂಡಲಿ ಸರ್ಕಾರದ ಆದೇಶಕ್ಕೂ ಒಂದಕ್ಕೊಂದು ವಿರೋಧಾಭಾಸವಾಗುವುದಿಲ್ಲವೆ ? ದಯವಿಟ್ಟು ಇದನ್ನು ಸರಿಪಡಿಸುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಪ್ರಶ್ನೆಗಳು ಇವೆ, ಸರ್ಕಾರದವರು ಆದೇಶ ಹೊರಡಿಸಬೇಕು, ಹೊರಡಿಸಿದ್ದಾರೆ. ಆ ಆದೇಶದಲ್ಲಿ ಏನು ಹೇಳಿದ್ದೇವೆ ಎಂದರೆ ಸುಪ್ರೀಂ ಕೋರ್ಟಿನ ತೀರ್ಮಾನಕ್ಕನುಗುಣವಾಗಿ ನಾವು ಕಾರ್ಯಕ್ರಮಗಳನ್ನು ಹಾಕತಕ್ಕದ್ದು ಒಂದು ಮತ್ತು ಅದಕ್ಕೆ ಅನ್ವಯವಾಗುವಂತೆ ಅವರು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದೇವೆ. ಆದರೆ ಇದರಿಂದ ಉದ್ಭವವಾಗುವ ಹಣಕಾಸಿನ ಪರಿಸ್ಥಿತಿಯನ್ನು ನೀವೇ ಭರಿಸಿಕೊಳ್ಳಬೇಕು. ಸರ್ಕಾರದಿಂದ ಇದಕ್ಕೆ ಹಣ ಸಿಗುವುದಿಲ್ಲವೆಂದು ನಾವು ಅವರಿಗೆ ಹೇಳಿದ್ದೇವೆ. ಇಲ್ಲಿ ನಾವು ಸುಪ್ರೀಂ ಕೋರ್ಟಿನ ತೀರ್ಮಾನಕ್ಕೆ ವಿರುದ್ಧವಾಗಿ ಹೋಗಿಲ್ಲ. ಏಕೆಂದರೆ, ಆಯಾ ಸಂಸ್ಥೆಯವರೇ ತಮ್ಮ ಹಣಕಾಸಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಇದನ್ನು ತೀರ್ಮಾನ ಮಾಡಬೇಕೆಂಬ ವಿಷಯವೂ ಸಹ ಇದರಲ್ಲಿ ಅಡಕವಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ತಾವು ಹೇಳಿದ್ದಕ್ಕೂ ಇಲ್ಲಿ ಲಿಖಿತವಾಗಿ ಉತ್ತರ ಕೊಟ್ಟಿರುವುದಕ್ಕೂ ವ್ಯತ್ಯಾಸವಿದೆ. ೧–೧–೮೭ ರಿಂದ ಇದನ್ನು ಜಾರಿಗೆ ತರಬೇಕೆಂದು ಆದೇಶವಿದ್ದರೂ ಸಹ ೧–೧–೮೭ ರಿಂದ ಜಾರಿಗೆ ಕೊಡಲಾಗಿದೆ. ಇದು ಸುಪ್ರೀಂ ಕೋರ್ಟಿನ ಆದೇಶಕ್ಕೆ ವಿರುದ್ಧವಾಗಿರುವುದಿಲ್ಲವೇ ? ಈ ಸ್ಥಳೀಯ ಸಂಸ್ಥೆಗಳು ಸರ್ಕಾರದ ಅಂಗ ಸಂಸ್ಥೆಗಳಾದ ಕಾರಣ ಆಗಿರುವ ತಪ್ಪನ್ನು ಸರಿಪಡಿಸುವ ಜವಾಬ್ದಾರಿ ಸರ್ಕಾರಕ್ಕೆ ಇಲ್ಲವೇ ? ಒಂದು ವರ್ಷ ಕಾಲ ಕಾರ್ಮಿಕರಿಗೆ ದಿನಗೂಲಿ ಸಿಕ್ಕಿದ್ದರೆ ಅವರು ಏನು ಮಾಡಬೇಕು ? ಇದನ್ನು ಸರ್ಕಾರ ನೋಡಬಾರದೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸರ್ವೋಚ್ಚ ನ್ಯಾಯಾಲಯದ ಆದೇಶ ಈ ಸ್ಥಳೀಯ ಸಂಸ್ಥೆಗಳಿಗೂ ಸಹ ಅನ್ವಯವಾಗುತ್ತದೆ. ಆದ್ದರಿಂದ ಇದರಿಂದ ಉಂಟಾಗುವಂತಹ ಹೆಚ್ಚಿನ ಖರ್ಚನ್ನು ಆಯಾ ಸಂಸ್ಥೆಯವರೇ ಭರಿಸಬೇಕೆಂದು ಸರ್ಕಾರ ಆದೇಶ ನೀಡಿದೆ.

ಶ್ರೀ ಎಂ. ಎಸ್ ಕೃಷ್ಣನ್.—ನೀವು ಈ ರೀತಿ ಹಾರಿಕೆ ಉತ್ತರ ಕೊಡುವುದು ಸರಿಯಲ್ಲ.

ಅಧ್ಯಕ್ಷರು.—ನಿಮಗೆ ಅವರ ಉತ್ತರ ಸರಿ ಇಲ್ಲದಿದ್ದರೆ ಅರ್ಧ ಗಂಟೆ ಕಾಲದ ಚರ್ಚೆಗೆ ನೋಟೀಸ್ ಕೊಡಿ. ಒಬ್ಬರಿಗೆ ಮೂರು ಸಲಕ್ಕಿಂತ ಹೆಚ್ಚಿನ ಸಲ ಉಪ ಪ್ರಶ್ನೆ ಕೇಳಲು ಅವಕಾಶವಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸಿನ ಮುಗ್ಗಟ್ಟು ಇದ್ದ ಕಾರಣದಿಂದ ಇದನ್ನು ೧–೧–೮೭ ರಿಂದ ಜಾರಿಗೆ ಕೊಡಲು ಸಾಧ್ಯವಾಗಲಿಲ್ಲ. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಅವರಿಗೆ ಈ ಕೆಲಸಗಾರರ ಬಗ್ಗೆ ಸಹಾನುಭೂತಿ ಇದ್ದರೂ ಸಹ ಅವರಲ್ಲಿ ಹಣ ಇಲ್ಲದಿರುವ ಕಾರಣದಿಂದ ೧–೧–೮೭ ರಿಂದ ಇದನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ. ೧–೧–೮೭ ರಿಂದ ಜಾರಿಗೆ ಕೊಟ್ಟರೆ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಖರ್ಚು ಬರುತ್ತದೆ. ಆದ್ದರಿಂದ ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಂಡು ಮುಂದಿನ ಪ್ರಶ್ನೆ ಕೇಳುವುದು ಒಳ್ಳೆಯದು. ಅವರು ೧–೧–೮೭ ರಿಂದಲೇ ಇದನ್ನು ಜಾರಿಗೆ ಕೊಟ್ಟರೆ ನಮ್ಮ ಅಭ್ಯಂತರವೇನೂ ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ದೇವರಂ ವರ ಕೊಟ್ಟರೂ ಪೂಜಾರಿ ವರ ಕೊಡ ಎಂಬಂತೆ ಆಗಿದೆ. ಈ ಬಾಕಿ ಹಣವನ್ನು ಒಂದೇ ಸಲ ಕೊಡಲು ಸಾಧ್ಯವಾಗದಿದ್ದರೆ ಕಂತಿನ ರೂಪದಲ್ಲಿಯಾದರೂ ಕೊಡುತ್ತೀರಾ ? ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಅಧ್ಯಕ್ಷರು.—ತಾವು ಈ ರೀತಿ ಮಾಡಿದರೆ ಹೇಗೆ ? ಮಾನ್ಯ ಮಂತ್ರಿಗಳ ಉತ್ತರ ತಮಗೆ ಸರಿ ಕಾಣದಿದ್ದರೆ ಅರ್ಧ ಗಂಟೆ ಕಾಲದ ಚರ್ಚೆಗೆ ನೋಟೀಸ್ ಕೊಡಿ. ವಾರದಲ್ಲಿ ಎರಡು ಸಲ ಅಂದರೆ ಮಂಗಳವಾರ ಮತ್ತು ಬುಧವಾರ ಇದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾವಂಯ್ಯ.—ಈಗ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಲಿಯ ನೌಕರರಂ ಈ ಬಗ್ಗೆ ಮುಷ್ಕರದ ನೋಟೀಸ್ ಕೊಟ್ಟಿದ್ದಾರೆ. ಇನ್ನು ನಾಲ್ಕು ದಿವಸಗಳಲ್ಲಿ ಇದನ್ನು ಇತ್ಯರ್ಥ ಮಾಡದಿದ್ದರೆ ನೀರು ಸರಬರಾಜನ್ನು ನಿಲ್ಲಿಸುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಕೂಡಲೇ ಇತ್ಯರ್ಥ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣಕಾಸಿನ ತೊಂದರೆಯಿಂದ ೧-೧-೮೯ರಿಂದ ಜಾರಿಗೆ ಕೊಡುವುದಕ್ಕೆ ಆಗಿಲ್ಲ. ೧-೧-೮೯ರಿಂದ ಜಾರಿಗೆ ಕೊಟ್ಟರೆ ಒಂದು ಕೋಟಿಗೂ ಹೆಚ್ಚು ಖರ್ಚು ಬರುತ್ತದೆ ಈಗ ಹಣಕಾಸಿನ ತೊಂದರೆ ಇರುವುದರಿಂದ ಅಲ್ಲಿನ ನೌಕರರು ಸಂಪು ಹೂಡಬಾರದೆಂದು ಮನವಿ ಮಾಡಿಕೊಳ್ಳುತ್ತೇನೆ. ಹಣಕಾಸಿನ ಪರಿಸ್ಥಿತಿ ಉತ್ತಮವಾದ ಮೇಲೆ ಸುಪ್ರೀಂ ಕೋರ್ಟಿನ ಆದೇಶದ ಪ್ರಕಾರ ಅವರಿಗೆ ಹಣ ಕೊಡುತ್ತೇವೆಂಬ ಮಾತನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ಸಮಾನ ಕೆಲಸಕ್ಕೆ ಸಮಾನ ವೇತನ ಕೊಡಬೇಕೆಂದು ಸುಪ್ರೀಂ ಕೋರ್ಟಿನ ಆದೇಶವಿದ್ದರೂ ಈ ರೀತಿ ಮಾಡಂವುದು ಏತಕ್ಕೆ ?

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎನ್. ಎಂ. ಅಡ್ಯಂತಾಯ.—ಅಂದರೆ ನಾವು ಪ್ರಶ್ನೆ ಕೇಳುವುದು ಬೇಡವೇ ? ತಾವು ಈ ರೀತಿ ಹೇಳಿದರೆ ಹೇಗೆ ?

ಅಧ್ಯಕ್ಷರು.—ನನಗೆ ಆ ರೀತಿ ಹೇಳಲು ಅಧಿಕಾರ ಇದೆ. ನಾನು ಬೇರೆ ಸದಸ್ಯರಿಗೂ ಅವರ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡಬೇಕಾಗಿದೆ.

ಶ್ರೀ ಎನ್. ಎಂ. ಅಡ್ಯಂತಾಯ.—ಸರ್ಕಾರದವರು ಪೇ ಕಮೀಷನ್ ರಿಪೋರ್ಟ್‌ನ್ನು ಆಕ್ಸೆಪ್ಟ್ ಮಾಡಿದ್ದೀರಿ, ಅದೇರೀತಿ ದಿನಗೂಲಿ ಕೆಲಸಗಾರರಿಗೆ ಸಂಬಳ ಏಕೆ ಕೊಡಬಾರದು ?

ಶ್ರೀ ಆರ್. ವೆಂಕಟರಾವಂಯ್ಯ.—ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ಆಫ್ ಆನ್ ಅವರ್ ಡಿಸ್ಕಷನ್‌ಗೆ ಹಾಕಿ ಎಂದು ಎಂ. ಎಸ್. ಕೃಷ್ಣನ್‌ರವರಿಗೆ ಹೇಳಿದ್ದೇನೆ. ಅರ್ಧ ತಾಸು ಅವಕಾಶ ಮಾಡಿಕೊಡುತ್ತೇನೆ. ಈಗ ಧರ್ಮಪ್ಪನವರೇ ತಮ್ಮ ಪ್ರಶ್ನೆಯನ್ನು ಕೇಳಿ.

ಚಂದ್ರಾ ಬಡಾವಣೆಯಲ್ಲಿ ನೆಲಮಟ್ಟದ ಜಲಾಶಯದ ನಿರ್ಮಾಣ.

೬೨೯. ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಂದ್ರಾ ಬಡಾವಣೆಗೆ ಕುಡಿಯುವ ನೀರು ಒದಗಿಸಲು ೧ ಕೋಟಿ ೩೨ ಲಕ್ಷ ರೂ.ಗಳನ್ನು ಕಟ್ಟಿ ೩-೪ ವರ್ಷಗಳು ಕಳೆದರೂ ನೀರನ್ನು ಒದಗಿಸುವ ಕಾರ್ಯವು ಸಮರ್ಪಕವಾಗಿ ನಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?